ಶ್ರೀ ವೀರೇಂದ್ರ ಪಾಟೀಲ್.—ಅದನ್ನೇ ನಾನು ಹೇಳುತ್ತಿದ್ದೇನೆ, ಏನೆಂದರೆ ಪೋಲೀಸ್ ಸಬ್-ಇನ್‌ಸ್ಪೆಕ್ಟರ್ ಅವರು ಲೂಟಿ ಮಾತಿದರು ಎಂಬ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ವೀರಪ್ಪ ಎನ್ನುವವರು ಲೂಟಿ ಮಾಡಿದ್ದಾರೆಂದು ಇಲ್ಲಿ ಹೇಳಿದ್ದಾರೆ. ರೆಕಾರ್ಡ್ಸ್ ಆಫ್ ರೈಟ್ ಪ್ರಕಾರ ಯಾರಿಗೆ ಅನ್ಯಾಯವಾಗಿದೆಯೋ ಅವರು ಕೋರ್ಟಿನಲ್ಲಿ ಕೇಸ್ ಹಾಕಿರುವುದರಿಂದ, ಈಗ ಕೋರ್ಟ್ ಮುಂದೆ ಕೇಸ್ ಇರುವುದರಿಂದ ನಾನೇನು ಆಕ್ಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Mr. SPEAKER.—Question No. 61. The hon'ble Member is not present. Next question No. 79.

Water supply from extended Uttara Nala in Kikkeri Hobli

79. Sri M. K. BOMME GOWDA (K. R. Pet).—

Will the Minister of State for Minor Irrigation be pleased to state :—

when Government intend to supply water from the extended Uttara Nala in Kikkeri Hobli, K. R. Pet Taluk ?

Sri D. PARAMESWARAPAA (Deputy Minister for Minor Irrigation and Electricity) [On be half of SRI A. J. DODDAMETI (Minister of State for Minor Irrigation)].—

As early as possible.

ಶ್ರೀ ಎಂ. ಕೆ. ಬೊಮ್ಮೇಗೌಡ.—ಉತ್ತರದಲ್ಲಿ ಸಾಧ್ಯವಾದಷ್ಟು ಬೇಗನೆ ಎಂದು ಹೇಳಿದ್ದೀರಿ, ಈ ಯೋಜನೆ ಯಾವಾಗ ಮಂಜೂರಾಯಿತು, ಯಾವಾಗ ಕಟ್ಟಿ ಮುಗಿಸರಾಯಿತು ಮತ್ತು ಕಂಟ್ರಾಕ್ಟ್ ಕೊಟ್ಟಿದ್ದು ಯಾವಾಗ ಎಂಬ ವಿವರಗಳನ್ನು ತಿಳಿಸುತ್ತೀರಾ ?

†Sri D. PARAMESWARAPPA.—The work was sanctioned in 1963 ; it was commenced on 5-3-64 and completed on 20-5-67.

ಶ್ರೀ ಎಂ. ಕೆ. ಬೊಮ್ಮೇಗೌಡ.—ನೀರನ್ನು ಈ ನಾಲೆಯಲ್ಲಿ ಇನ್ನೂ ಬಿಡದಿರುವುದಕ್ಕೆ ಕಾರಣವೇನು ?

Sri D. PARAMESWARAPPA.—This channel had to be extended by one mile. Moreover there were certain difficulties experienced. For instance, hard rock was met with and there were often slips of the soil in deep cutting. So, there was delay. But according to the latest information, water has been allowed up to 4/63 mile on 12th December 1968.

ಶ್ರೀ ಎಂ. ಕೆ. ಬೊಮ್ಮೇಗೌಡ.—ಹಾರ್ಡ್ ರಾಕ್ ಸಿಕ್ಕಿದ್ದರಿಂದ ಕೆಲಸ ನಿಧಾನವಾಯಿತೆಂದು ಹೇಳಿದಿರಿ. ಈ ಬಗ್ಗೆ ಒಂದು ಜೇರೆ ಎಸ್ಟಿಮೇಟನ್ನು 8 ಸಾವಿರ ರೂಪಾಯಿಗಳಿಗೆ ತಯಾರು ಮಾಡಿ ಸರ್ಕಾರಕ್ಕೆ ಕಳಿಸಿದಮೇಲೆ, ಸರ್ಕಾರದವರು ಆ ಎಸ್ಟಿಮೇಟನ್ನು ಒಂದೂವರೆ ವರ್ಷದವರೆಗೆ ಮಂಜೂರು ಮಾಡಲಲ್ಲ. ಈ ವಿಚಾರ ತಮಗೆ ಗೊತ್ತಿಲ್ಲವೆ ?

Sri D. PARAMESWARAPPA.—It is not correct.

ಅಧ್ಯಕ್ಷರು.—ಪ್ರಶ್ನೆ 85 ಮತ್ತು 273 ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬಹುದು.